**ದಿನಾಂಕ 17.11.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಜಿ.ಎಸ್.ಆರ್. ವಕೀಲರಿಂದಃ**

1. ನಾನು ಬಿ.ಎ. ಪದವೀಧರೆ. ನನ್ನ ಗಂಡ ಹನುಮಂತಪ್ಪನವರು ವೈಧ್ಯರು ಎಂದರೆ ಸರಿ. ನನ್ನ ತಂದೆಯೂ ಸಹ ವೈಧ್ಯರು ಎಂದರೆ ಸರಿ. ಬೆಂಗಳೂರಿನಲ್ಲಿ ನನ್ನ ತಂದೆಯ ನರ್ಸಿಂಗ್ ಹೋಂ ಇದೆ ಎಂದರೆ ಸರಿ. 1979 ರಲ್ಲಿ ನನ್ನ ವಿವಾಹವಾಗಿರುತ್ತದೆ. ಹನುಮಂತಪ್ಪನವರು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಾಂಗ ಮಾಡಿದ್ದಾರೆ. ನನ್ನ ಗಂಡ ಹನುಮಂತಪ್ಪನವರು ಹಾಸ್ಟೆಲ್ ನಲ್ಲಿ ಇದ್ದರು ಎಂದರೆ ಸಾಕ್ಷಿಯು ಅವರಿಗೆ ಖರ್ಚು ವೆಚ್ಚಗಳನ್ನು ನಿಭಾಯಿಸಲು ಆಗದ ಕಾರಣ ಅವರ ಸೋದರ ಮಾವ ರಾಮಕೃಷ್ಣಪ್ಪನವರು ಅವರ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಹಾಸ್ಟೆಲ್ ಸರ್ಕಾರಿ ಹಾಸ್ಟೆಲ್ ಎಂದರೆ ಸರಿ. ಬಿ.ಎಂ.ಸ್. ಕಾಲೇಜಿನಲ್ಲಿ ನನ್ನ ಗಂಡ ಹನುಮಂತಪ್ಪನಿಗೆ ಸರ್ಕಾರಿ ಸೀಟು ಸಿಕ್ಕಿತ್ತು ಎಂದರೆ ಸರಿ. ಅವರಿಗೆ ಹಾಸ್ಟೆಲ್‌ನ ವಾತಾವರಣಕ್ಕೆ ಒಗ್ಗದೇ ಇರುವ ಕಾರಣ ಅವರು ಸುರೇಶ್ ರವರ ಮನೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ.
2. ಅದು ಸರ್ಕಾರಿ ಕಾಲೇಜು ಆಗಿದ್ದು, ಉಚಿತ ಹಾಸ್ಟೆಲ್ ಆಗಿತ್ತು ಎಂದರೆ ಸರಿ. ನನ್ನ ಮದುವೆ ಹೊಸ ಸಂಬಂಧದಲ್ಲಿ ಆಗಿದೆ ಮತ್ತು ಗುರು ಹಿರಿಯ ಸಮಕ್ಷಮ ನಿಶ್ಚಿತವಾಗಿದೆ ಎಂದರೆ ಸರಿ. ಮದುವೆಗೂ ಮುನ್ನ ಅವರ ಕುಟುಂಬದಲ್ಲಿ ಏನೆಲ್ಲಾ ವ್ಯವಹಾರ ಆಗಿದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ರಪಘುನಂದನ್ ರವರು ಹೇಳಿಕೊಟ್ಟ ಕಾರಣ ನಾನು ಹನುಮಂತಪ್ಪನವರು ವ್ಯಾಸಾಂಗ ಮುಗಿಯುವರೆಗೂ ಸುರೇಶ್ ರವರ ಮನೆಯಲ್ಲಿ ಇದ್ದರು ಎಂದು ಹೇಳುತ್ತಿದ್ದು ಆದರೆ ಹನುಮಂತಪ್ಪನವರು ವ್ಯಾಸಾಂಗ ಮುಗಿಯುವವರೆಗೂ ಹಾಸ್ಟೆಲ್ ನಲ್ಲಿಯೇ ಇದ್ದರು ಎಂದರೆ ಸರಿಯಲ್ಲ. ರಾಮಕೃಷ್ಣಪ್ಪನವರು ಖರ್ಚು ವೆಚ್ಚ ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
3. ಮದುವೆಯಾದ ನಂತರ ನನ್ನ ತಂದೆಯವರ ನರ್ಸಿಂಗ್ ಹೋಂ ನನ್ನು ನನ್ನ ಯಜಮಾನರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮದುವೆಯಾದ ನಂತರ ನನ್ನ ಯಜಮಾನರು ಬೆಂಗಳೂರಿನಲ್ಲಿಯೇ ವೈಧ್ಯವೃತ್ತಿಯನ್ನು ಮಾಡುತ್ತಿದ್ದರು ಎಂದರೆ ಸರಿ. ಅದೇ ಕಾರಣದಿಂದ

ನಾನು ಬೆಂಗಳೂರಿನಲ್ಲಿಯೇ ಇದ್ದೆ ಎಂದರೆ ಸಾಕ್ಷಿಯು ಸ್ವಲ್ಪ ತಿಂಗಳುಗಳ ಕಾಲ ಅತ್ತೆಯ ಮನೆಯಾದ ಗುಂಡಚಿಕ್ಕನಹಳ್ಳಿಯಲ್ಲಿ ವಾಸವಿದ್ದು, ನಂತರ ಬೆಂಗಳೂರಿನ ನಮ್ಮ ತಂದೆಯ ಮನೆಯಲ್ಲಿ ಇದ್ದೆನು ಎಂದು ನುಡಿಯುತ್ತಾರೆ. ನನ್ನ ಗಂಡ ಮದುವೆಯಾದ ನಂತರ ಬೆಂಗಳೂರಿನಲ್ಲಿ ವೈಧ್ಯ ವೃತ್ತಿ ಮಾಡುತ್ತಿದ್ದ ಕಾರಣ ನಾನು ಒಂದು ದಿನವೂ ಸಹ ಬಂದು ಹಳ್ಳಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

4. ದಾನ ಮಾಡಿರುವಂತಹ ಜಮೀನುಗಳು ನನ್ನ ಅತ್ತೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಅವರಿಗೆ ಸದರಿ ಆಸ್ತಿಗಳು ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ರಾಮಕೃಷ್ಣರವರು ನಮ್ಮ ಅತ್ತೆಯ ಹೆಸರಿನಲ್ಲಿ ಗಿಫ್ಟ್ ಡೀಡ್ ಮಾಡಿದ್ದರು, ಅದನ್ನು ನಾನು ಕೇಳಿಸಿಕೊಂಡಿರುವುದನ್ನು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಹೇಳುತ್ತಾರೆ. ಸದರಿ ಜಮೀನುಗಳು ರಾಮಕೃಷ್ಣಪ್ಪನವರು ಗಿಫ್ಟ್ ಡೀಡ್ ಮಾಡಿದ್ದ ಜಮೀನುಗಳು ಅಲ್ಲ, ನಮ್ಮ ಅತ್ತೆಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ನಮ್ಮ ಅತ್ತೆಯವರಿಗೆ ಸರ್ವೆ ನಂ. 452 ರಲ್ಲಿ 5 ಎಕರೆ, 135/2 ರಲ್ಲಿ 8 ಎಕರೆ 14 ಗುಂಟೆ ಜಮೀನು ಇದ್ದು, ಅವುಗಳು ತರಿ ಜಮೀನುಗಳು ಆಗಿದ್ದವು ಎಂದರೆ ಸರಿಯಲ್ಲ, ಅದರಲ್ಲಿ ತೆಂಗಿನ ಗಿಡ ಇದ್ದು, ಗದ್ದೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅದರ ಆದಾಯದಿಂದಲೇ ಅವರ ಮಗನ ವಿದ್ಯಾಭ್ಯಾಸ ಮಾಡಿಸಿದ್ದರು ಎಂದರೆ ಸರಿಯಲ್ಲ.

5. ನಮ್ಮ ಅತ್ತೆಯವರೇ ತಮ್ಮ ಕೊನೆಗಾಲದಲ್ಲಿ ಗುಂಡಚಿಕ್ಕೇನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ಅತ್ತೆಯವರು ಅವರ ಸ್ವಯಾರ್ಜಿತ ಸ್ವತ್ತಾದ ಕಾರಣ ದಾನಪತ್ರವನ್ನು ಬರೆದಿದ್ದಾರೆ ಎಂದರೆ ಸರಿಯಲ್ಲ. ರೇಣುಕಾದೇವಿಯವರಿಗೂ ಮತ್ತು ನನಗೂ ವೈಯಕ್ತಿಕವಾಗಿ ದ್ವೇಶವಿರುವ ಕಾರಣ ರಘುನಂದನ್ ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆಯವರು ಲಕ್ಷ್ಮಮ್ಮನವರು ಆರ್ಥಿಕವಾಗಿ ಸದೃಢವಾಗಿದ್ದರು ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ಯಾವ ಯಾವ ಜಮೀನುಗಳ ಮೇಲೆ ಯಾವ ವಿಚಾರವಾಗಿ ಕೇಸು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಈ ದಾವೆಯ ಬಗ್ಗೆ ಏನೂ ವಿಚಾರ ತಿಳಿಯದಿದ್ದರೂ ಸಹ ರಘುನಂದನ್ ರವರಿಗೆ

ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**